ಓ.ಎಸ್ ನಂ.**153/2023**
**ಪಿಡಬ್ಲ್ಯೂ- 2**
ಪ್ರಕಾಶ್

<u>ದಿನಾಂಕ **25.03.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ ಎನ್ ಎಂ ಜಿ ವಕೀಲರಿಂದ</u>

ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. **1** ನೇ ಪ್ರತಿವಾದಿಯ ಗಂಡ ದೊಡ್ಡ ನಿಂಗೆಗೌಡರು ನನ್ನ ಸಂಬಂದ ಹಾಗೂ ಸ್ನೇಹಿತರು ಅಲ್ಲ. ನನ್ನ ಕಬ್ಬಿನ ಕ್ರಶರ್ ಗೆ ಸದರಿ ದೊಡ್ಡ ನಿಂಗೇಗೌಡರು ಕಬ್ಬಿನ ಹಾಕುತ್ತಿದ್ದರು. ಸದರಿ ದೊಡ್ಡನಿಂಗೇಗೌಡರಿಗೆ ಆರ್ಥಿಕವಾಗಿ ಸಭಾಲರಾಗಿದ್ದರು ಎಂದರೆ ಸರಿ. ಸದರಿ ದೊಡ್ಡ ನಿಂಗೇಗೌಡರಿಗೆ ಮಕ್ಕಳು ಇರುವ ಬಗ್ಗ ನನಗೆ ಗೊತ್ತಿಲ್ಲ.

**2.** ವಾದಿ ಗೊತ್ತು ನಮ್ಮ ಪಕ್ಕದ ಗ್ರಾಮದ ನಿವಾಸಿಯಾಗಿರುತ್ತೇನೆ. ಸದರಿಯವರು ನನ್ನ ಸ್ನೇಹಿತರು. ದೊಡ್ಡ ನಿಂಗೇಗೌಡ ಮತ್ತು ವಾದಿಯ ನಡುವಿನ ವ್ಯವಹಾರದ ಬಗ್ಗ ಗೊತ್ತ ಎಂದರೆ ಸಾಕ್ಷಿಯು ದೊಡ್ಡ ನಿಂಗೇಗೌಡರು ವಾದಿಯಿಂದ ಹಣ ಪಡೆಯಬೇಕು ಹಾಗೂ ದೊಡ್ಡ ನಿಂಗೇಗೌಡರಿಗೆ ವಾದಿಯು ತಮ್ಮನ ಮಗ ಎಂದು ನನಗೆ ಹೇಳಿರುತ್ತಾರೆ. ದೊಡ್ಡ ನಿಂಗೇಗೌಡರಿಗೆ ಗಂಡು ಮಕ್ಕಳು ಇಲ್ಲದೇ ಇರುವ ಕಾರಣದಿಂದ ವಾದಿಯ ಅವರ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

**3.** ಪಾಂಡವಪುರದಲ್ಲಿ ದೊಡ್ಡ ನಿಂಗೇಗೌಡರು ವಾದಿಯ ಬಳಿ ಹಣವನ್ನು ದೊಡ್ಡ ನಿಂಗೇಗೌಡರು ವ್ಯವಸಾಯಕ್ಕಾಗಿ ಮತ್ತು ಕುಟುಂಬದ ನಿರ್ವಾಹಣೆಗಾಗಿ ವಾದಿಯ ಬಳಿ ಕೇಳಿರುತ್ತಾರೆ. ಸದರಿ ಹಣವನ್ನು ಕೇಳುವಾಗ ನಾನು ಮತ್ತು ವಾದಿ ಇದ್ದೇವು. **2** ಲಕ್ಷ ಹಣವನ್ನು ದೊಡ್ಡ ನಿಂಗೇಗೌಡರರು ವಾದಿಯಿಂದ ಕೇಳಿದ್ದು ಸದರಿ ಹಣವನ್ನು ಎರಡು ತಿಂಗಳ ಒಳಗಾಗಿ ವಾಪಸ್ ಕೊಡುವುದಾಗಿ ತಿಳಿಸಿರುತ್ತಾರೆ. ದೊಡ್ಡ ನಿಂಗೇಗೌಡರು ಅಕ್ಷರಸ್ಥರಾಗಿರುವ ಬಗ್ಗ ನನಗೆ ಗೊತ್ತಿಲ್ಲ.

ದೊಡ್ಡ ನಿಂಗೇಗೌಡರು ಬಡ್ಡಿ ವ್ಯವಹಾರ ಮಾಡುತ್ತಿದ್ದು ಕಡಿಮೆ ಬಡ್ಡಿಗಾಗಿ ಬೇರೆಯವರಿಂದ ಹಣವನ್ನು ಪಡೆದು ಹೆಚ್ಚಿನ ಬಡ್ಡಿಗಾಗಿ ಕೊಡುತ್ತಿದ್ದರು.

**4.** ದೊಡ್ಡ ನಿಂಗೇಗೌಡರು ಹಣವನ್ನು ಪಡೆದಾಗ ದಾಖಲೆಗಳಲ್ಲಿ **4** ಹೆಬ್ಬೆಟಿನ ಗುರುತನ್ನು ಹಾಕಿರುತ್ತಾರೆ. ಸಾಕ್ಷಿಯು ನಿಪಿ-**1** ಮತ್ತು **2** ರಲ್ಲಿ ಕಂಡು ಬರುತ್ತಿರುವ **4** ಹೆಬ್ಬೆಟಿನ ಗುರುತು ದೊಡ್ಡ ನಿಂಗೇಗೌಡರದು ಎಂದು ಗುರುತಿಸಿದರು. ನನ್ನ ಸಮಕ್ಷಮದಲ್ಲಿ ನಿಪಿ-**1** ಮತ್ತು **2** ದಾಖಲೆಗಳಿಗೆ ಸ್ಟ್ಯಾಂಪ್ ನ ಮೇಲೆ ಹೆಬ್ಬೆಟಿನ ಗುರುತನ್ನು ದೊಡ್ಡ ನಿಂಗೇಗೌಡರು ಹಾಕಿರುತ್ತಾರೆ. ನಂತರ ಎರಡು ಹೆಬ್ಬೆಟಿನ ಗುರುತನ್ನು ಸಾಕ್ಷಿ ಹಾಕಿರುತ್ತಾರೆ ಆಗ ಡೀಡ್ ರೈಟರ್ ರಾಮ ಮೂರ್ತಿ ಹೆಬ್ಬೆಟಿನ ಗುರುತು ಹಾಕುವಹಾಗಿಲ್ಲ ನೀವು ಹಾಕೀದ್ದೀರಾ ಏನೂ ಪರವಾಗಿಲ್ಲ ಎಂದು ದೊಡ್ಡ ನಿಂಗೇಗೌಡರಿಗೆ ಹೇಳಿರುತ್ತಾರೆ. ಸ್ಟ್ಯಾಂಪಿನ ಮೇಲೆ ದೊಡ್ಡ ನಿಂಗೇಗೌಡರು ಮೊದಲಿಗೆ ಹೆಬ್ಬೆಟಿನ ಗುರುತುಗಳನ್ನು ಹಾಕಿರುತ್ತಾರೆ ನಂತರ ಉಳಿದ ಇಬ್ಬರು ಹಾಕಿರುತ್ತಾರೆ. ವೆಂಡರ್ ನಿಪಿ-**1** ಮತ್ತು **2** ಸ್ಟ್ಯಾಂಪ್ ನ ಮೇಲೆ ಹೆಬ್ಬೆಟ್ಟು ಗುರುತು ಹಾಕಿ ಎಂದು ಬೇರೆ ದಾಖಲೆಯನ್ನು ಬರೆಯುತ್ತಿದ್ದರು ಆಗ ದೊಡ್ಡ ನಿಂಗೇಗೌಡರಿಗೆ ಎರಡು ಸ್ಟ್ಯಾಂಪ್ ನ ಮೇಲೆ ಹೆಬ್ಬೆಟಿನ ಗುರುತುಹಾಕಿದರು ನಂತರ ಅದೇ ದಾಖಲೆಯ ಪಕ್ಕದಲ್ಲಿಯು ಸಹ ಹೆಬ್ಬೆಟಿನ ಗುರುತು ಹಾಕಿರುತ್ತಾರೆ. ವೆಂಡರ್ ದೊಡ್ಡ ನಿಂಗೇಗೌಡರರು ತಪ್ಪಾಗಿ ಬೇರೆ ಕಡೆ ಹೆಬ್ಬೆಟ್ಟು ಗುರುತು ಹಾಕಿದ್ದಾರೆ ಪರವಾಗಿಲ್ಲ ಎಂಬುದರ ಬಗ್ಗೆ ನಿಪಿ-**1** ಮತ್ತು **2** ದಾಖಲೆಯಲ್ಲಿ ಶರ ಬರೆದಿದ್ದಾರೆ ಎಂದರೆ ಸಾಕ್ಷಿಯು ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವೆಂಡರ್ ಕಚೇರಿಗೆ ಹೋಗುವಷ್ಟಲ್ಲಿ ದೊಡ್ಡ ನಿಂಗೇಗೌಡರು ಹೆಬ್ಬೆಟಿನ ಗುರುತನ್ನು ದಾಖಲೆಯ ಮೇಲೆ ಹಾಕಿರುತ್ತಾರೆ. ನನಗೆ ನಿಪಿ-**1** ಮತ್ತು **2** ದಾಖಲೆಯಲ್ಲಿ ಇರುವ ವಿಚಾರವನ್ನು ಓದಿ ಹೇಳಿರುವುದಿಲ್ಲ.

**5.** ಸಾಕ್ಷಿಗೆ ಎರಡು ದಾಖಲೆಗಳನ್ನು ನೀಡಲಾಗಿ ಸದರಿ ದಾಖಲೆಗಳನು ನೋಡಿದ್ದೀರಾ ಎಂದು ಕೇಳಿದಾಗ ಇಲ್ಲ ಎಂದು ನುಡಿದಿರುತ್ತಾರೆ. ನಾನು ಹಾಜರಿದ್ದಾಗ ದೊಡ್ಡ ನಿಂಗೇಗೌಡರು ಸ್ಟ್ಯಾಂಪ್ ನ ಮೇಲೆ ಹೆಬ್ಬೆಟಿನ ಗುರುತು ಹಾಕಿರುತ್ತಾರೆ. ನಾನು ನಮ್ಮ ದಾಖಲೆಗಳನ್ನು ಝುರಾಕ್ಸ್ ಮಾಡಲು ಹೋದಾಗ ನಿಪಿ-**1** ಮತ್ತು **2** ದಾಖಲೆಗಳಲ್ಲಿ ಬೇರೆ ಕಡೆ ನಿಂಗೇಗೌಡರು ಹೆಬ್ಬೆಟಿನ ಗುರುತು

ಹಾಕಿರುತ್ತಾರೆ. ನಾನು ಝುರಾಕ್ಸ್ ಮಾಡಿಕೊಂಡು ಬರಲು ಹೋಗಿರುವ ದಾಖಲೆ ಆನ್ ಡಿಮಾಂಡ್ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ದೊಡ್ಡ ನಿಂಗೇಗೌಡದರು ಸ್ಟ್ಯಾಂಪ್ ನ ಮೇಲೆ ಹೆಬ್ಬೆಟು ಗುರುತು ಹಾಕಿದ ನಂತರ ಸದರಿ ದಾಖಲೆಯ ಮೇಲೆ ಸಹಿ ಮಾಡಿರುತ್ತೇನೆ. ನಮ್ಮ ಸಮಕ್ಷಮದಲ್ಲೇ ವೆಂಡರ್ ನಿಪಿ-1 ಮತ್ತು 2 ರಲ್ಲಿ ಇರುವ ಒಕ್ಕಣಿಕೆಗಳನ್ನು ಬರೆದಿರುತ್ತಾರೆ.

6. ದೊಡ್ಡ ನಿಂಗೇಗೌಡರು ಯಾವಾಗ ಮೃತ ಹೊಂದಿರುತ್ತಾರೆ ನನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ದಾಖಲೆ ಸಮಯದಲ್ಲಿ ದೊಡ್ಡ ನಿಂಗೇಗೌಡರು ಅನಾರೋಗ್ಯಕ್ಕೆ ಒಳಗಾಗಿ ಹಾಸಿಗೆಯನ್ನು ಹಿಡಿದ್ದಿದ್ದರು, ನಾನು ಮತ್ತು ವಾದಿಯು ಸೇರಿ ನಿಪಿ-1 ಮತ್ತು 2 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

7. ನನ್ನ ಸಮಕ್ಷಮದಲ್ಲಿ ವೆಂಕಟೇಶ್ ರವರು ನಿಪಿ-1 ಮತ್ತು 2 ದಾಖಲೆಯ ಮೇಲೆ ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ-1 ಮತ್ತು 2 ದಾಖಲೆಯಲ್ಲಿ ಕಂಡು ಬರುತ್ತಿರುವ ಹೆಬ್ಬೆಟಿನ ಮೇಲೆ ಇರುವ ಸಹಿಯನ್ನು ವೆಂಕಟೇಶ್ ಸಹಿ ಎಂದು ಗುರುತಿಸಿದರು. ನಮ್ಮ ಸಮಕ್ಷಮದಲ್ಲಿ ದೊಡ್ಡ ನಿಂಗೇಗೌಡರು ಯಾವಾ ಹೆಬ್ಬೆಟಿನ ಗುರುತನ್ನು ಹಾಕಿರುವುದಿಲ್ಲ, ಸದರಿ ದಾಖಲೆಗಳನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದೊಡ್ಡ ನಿಂಗೇಗೌಡರು ಹಾರ್ಥಿಕವಾಗಿ ಸಿರಿವಂತರು ಅವರಿಗೆ ಸಾಲ ಮಾಡುವ ದರದು ಇರುವುದಿಲ್ಲ ನಾನು ಮತ್ತು ವಾದಿ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ 2 ಲಕ್ಷ ಸಾಲ ನೀಡುವ ಹಾರ್ಥಿಕ ಸಮಾರ್ಥ್ಯ ಇರಲಿಲ್ಲ ಎಂದರೆ ಸರಿಯಲಲ,

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖ ವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

**ಸಾ.ಓ.ಹೇ.ಸ.ಇದೆ.**

2 ನೇ ಅಪರ **ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಪಾಂಡವಪುರ.**